# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.15/ಪಿಆರ್: 19 :2021-22 ದಿನಾಂಕ: 19.01.2022

## ದಾಸರಹಳ್ಳಿ ವಾರ್ಡ್-15ರ ವಾರ್ಡ್ ಸಭೆಯ ನಡವಳಿ

ದಿ.19.01.2022 ರಂದು ಬೆಳಗ್ಗೆ 12.30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ.ಮಲ್ಲಿಕಾರ್ಜುನ್, ಉಪ-ಆಯುಕ್ತರು, ವಾರ್ಡ್ ಕಮಿಟಿ ನೊಡೆಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು. ಇಂದಿನ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ನಡವಳಿಗಳು.

**ಹಾಜರಿದ್ದವರು:**

1. ಶ್ರೀ.ವೆಂಕಟೇಶಪ್ಪ, ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ದಾಸರಹಳ್ಳಿ ವಾರ್ಡ್ ನಂ.15
2. ಶ್ರಿಮತಿ.ಡಾ॥ಮಂಜುಳ, ಮೆಡಿಕಲ್ ಆಫೀಸರ್, ನೆಲಮಹೇಶ್ವರಿ UPHC
3. ಶ್ರಿ.ಪಾರ್ಥ, ಹಿರಿಯ ಆರೋಗ್ಯ ಪರಿವೀಕ್ಷಕರು (ವಾ.ನಂ.15)
4. ಶ್ರೀಮತಿ.ಪವಿತ್ರ & ಶ್ಯಾಮಲಾ, ಲಿಂಕ್‌ವರ್ಕರ್ಸ್ ಬಿಬಿಎಂಪಿ, ದಾಸರಹಳ್ಳಿ
5. ಶ್ರೀ.ಚಂದ್ರಶೇಖರ್, ವಾರ್ಡ್ ಸಮಿತಿ ಸದಸ್ಯರು, ದಾಸರಹಳ್ಳಿ
6. ಶ್ರೀಮತಿ.ತ್ರಿವೇಣಿ, ಕಿರಿಯ ಆರೋಗ್ಯ ಪರಿವೀಕ್ಷಕರು (ವಾ.ನಂ.15)
7. ಶ್ರೀ.ಮರಿಸಿದ್ದಪ್ಪ, ವಾರ್ಡ್ ಸಮಿತಿ ಸದಸ್ಯರು, ದಾಸರಹಳ್ಳಿ
8. ಶ್ರೀ.ಬಾಲಕೃಷ್ಣ, ಘನತ್ಯಾಜ್ಯ ಮೇಲ್ವಿಚಾರಕರು, ಬಿಬಿಎಂಪಿ
9. ಶ್ರೀ.ಮುನಿರಾಜು, ವಾರ್ಡ್ ಸಮಿತಿ ಸದಸ್ಯರು, ದಾಸರಹಳ್ಳಿ

ನೋಡೆಲ್ ಅಧಿಕಾರಿಗಳು ವಾರ್ಡ್ ನಂ.15, ದಾಸರಹಳ್ಳಿ ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರತೀ ವಾರ್ಡ್‌ಗೆ ನೋಡೆಲ್ ಅಧಿಕಾರಿಗಳನ್ನು ನೇಮಿಸಿ, ಸಾರ್ವಜನಿಕ ಕುಂದುಕೊರತೆ ನಿವಾರಣಾ ಸಂಬಂಧ ಪ್ರತೀ ತಿಂಗಳ ಮೊದಲ ಮತ್ತು ಮೂರನೇ ಶನಿವಾರ ಸಭೆ ಸೇರಿ ವಾರ್ಡ್‌ನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ, ಅಗತ್ಯ ಕ್ರಮವಹಿಸಲು ಸೂಚಿಸಿರುವುದಾಗಿ ತಿಳಿಸಿದರು.

Scanned with CamScanner

1. **ಕೋವಿಡ್-19 ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.**

ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಚರ್ಚಿಸಿ ಪ್ರತೀ ದಿನ 02 ಮೊಬೈಲ್ ಟೀಂ ನ ಮೂಲಕ ರೋಗ ಪತ್ತೆ ಕಾರ್ಯವನ್ನು ನಡೆಸಲಾಗುತ್ತಿರುತ್ತದೆ. ಈಗಾಗಲೇ ಮೂರನೇ ಕೋವಿಡ್ ಅಲೆಯು ಬರುವ ಸಂಭವವಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಸಭೆ ಸಮಾರಂಭಗಳಲ್ಲಿ ಹೆಚ್ಚು ಜನರು ಸೇರದಂತೆ, ಸಾಮಾಜಿಕ ಅಂತರ ಹಾಗೂ ಮಾಸ್ಕ್‌ಗಳನ್ನು ಕಡ್ಡಾಯವಾಗಿ ಧರಿಸಿರುವಂತೆ ಹಾಗೂ ಈಗಾಗಲೇ ಕೋವೀಡ್ ಲಸಿಕೆ ನೀಡುತ್ತಿರುವುದರಿಂದ ಸಾವ
ರ್ಜನಿಕರಿಗೆ ಕೋವಿಡ್‌ಗೆ ಸಂಬಂಧಪಟ್ಟಂತೆ ಯಾವುದೇ ರೋಗ ಲಕ್ಷಣಗಳು ಕಂಡುಬಂದಲ್ಲಿ ನಿರ್ಲಕ್ಷತನ ತೋರದೆ, ಸ್ವಯಂ ಪ್ರೇರಿತರಾಗಿ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪರೀಕ್ಷೆಗೆ ಒಳಪಟ್ಟು, ಚಿಕಿತ್ಸೆಯನ್ನು ಪಡೆಯಲು ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ ಕ್ರಮವಹಿಸಲು ಆರೋಗ್ಯ ಪರಿವೀಕ್ಷಕರು ರವರುಗಳಿಗೆ ಸೂಚಿಸಲಾಯಿತು.

ಕಡ್ಡಾಯವಾಗಿ ಮಾಸ್ಕ್ ಧರಿಸುವ ಸಂಬಂಧ ಫೀಲ್ಡ್ ಮಾರ್ಷಲ್‌ಗಳ ಸಮನ್ವಯದೊಂದಿಗೆ ಜನಜಾಗೃತಿ ಮೂಡಿಸಲಾಗುತ್ತಿದೆ ಅದರಂತೆ ಮಾಸ್ಕ್ ಧರಿಸದೇ ಸಾರ್ವಜನಿಕವಾಗಿ ಓಡಾಡುವವರಿಗೆ ಕಡ್ಡಾಯವಾಗಿ ನಿಯಮಾನುಸಾರ ರೂ.250.00 ಗಳನ್ನು ದಂಢ ವಿಧಿಸಿ ಕ್ರಮ ಜರುಗಿಸಲಾಗುತ್ತಿದ್ದು, ಮಾಸ್ಕ್ ಧರಿಸದೇ ಸಾರ್ವಜನಿಕವಾಗಿ ಓಡಾಡುತ್ತಿರುವವರಿಗೆ ಪೋಲೀಸ್ ಸಹಾಯದೊಂದಿಗೆ ಪ್ರತೀ ನಿತ್ಯ ಸುಮಾರು 10 ರಿಂದ 15 ಜನಗಳಿಗೆ ದಂಢವಿಧಿಸಲಾಗುತ್ತಿದೆ ಎಂದು ಸಭೆಯಲ್ಲಿ ಮಾರ್ಷಲ್ ರವರು ವಿವರಿಸಿದರು. ಸಧ್ಯದ ಪರಿಸ್ಥಿತಿಯಲ್ಲಿ ವಾರ್ಡ್‌ನಲ್ಲಿ 38000.00 ಜನಸಂಖ್ಯೆ ಇದ್ದು, ಮೊದಲನೇ ಹಂತದಲ್ಲಿ ಕೋವಿಡ್ ವ್ಯಾಕ್ಸಿನ್ 92% ಹಾಗೂ ಎರಡನೇ ಹಂತದಲ್ಲಿ ಕೋವಿಡ್ ವ್ಯಾಕ್ಸಿನ್ 78% ಪೂರ್ಣಗೊಂಡಿರುವುದಾಗಿ ತಿಳಿಸಿದರು.

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಂಬಂಧಿಸಿದಂತೆ, ಆರೋಗ್ಯ ಪರಿವೀಕ್ಷಕರು ಈ ಕೆಳಕಂಡಂತೆ ಮಾಹಿತಿ ಒದಗಿಸಿದರು.

| | |
|---|---|
| ಒಟ್ಟು ಪ್ರಕರಣಗಳು | 4221 |
| ಬಿಡುಗಡೆಯಾದ ಪ್ರಕರಣಗಳು | 3764 |
| ಸಕ್ರಿಯ ಪ್ರಕರಣಗಳು | 386 |
| ಮರಣ | 69 ಇರುತ್ತದೆಂದು ಸಭೆಯಲ್ಲಿ ತಿಳಿಸಿದರು. |

2. **ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.**

ಘನತ್ಯಾಜ್ಯ ನಿರ್ವಹಣೆಯ ಸಂಬಂಧ ವಾರ್ಡ್‌ನಲ್ಲಿ 19 ಆಟೋಗಳು, ಒಣ ಕಸ ಸಂಗ್ರಹಣಾ ಆಟೋ-03, ಹಾಗೂ 02 ಕಾಂಪ್ಯಾಕ್ಟರ್ ವಾಹನಗಳು ಘನತ್ಯಾಜ್ಯ ವಿಲೇವಾರಿಗಾಗಿ ನಿಯೋಜಿಸಲಾಗಿರುತ್ತದೆಂದು ವಾರ್ಡ್ ಸಮಿತಿ ಸಭೆಯಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ತಿಳಿಸಿದರು.

ದಾಸರಹಳ್ಳಿ ವಾರ್ಡ್ ವ್ಯಾಪ್ತಿಯ ರಸ್ತೆ ಬದಿಗಳಲ್ಲಿ ಹಾಗೂ ಖಾಲಿ ನಿವೇಶನಗಳಲ್ಲಿ ಸಾರ್ವಜನಿಕರು ಕಸ ಹಾಕುತ್ತಿದ್ದು, ಇದರಿಂದ ಸೊಳ್ಳೆಗಳು ಹೆಚ್ಚಾಗಿ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ಸಾರ್ವಜನಿಕರಿಗೆ ಅರಿವು ಮೂಡಿಸಿ, ಮನೆ ಮನೆಗೆ ತೆರಳುವ ಘನತ್ಯಾಜ್ಯ ಸಂಗ್ರಹಣಾ ಆಟೋಗಳಿಗೆ ಕಸವನ್ನು ನೀಡುವ ಬಗ್ಗೆ ಆರೋಗ್ಯ ಪರಿವೀಕ್ಷಕರಿಗೆ ಸದಸ್ಯ ಕಾರ್ಯದರ್ಶಿಗಳು ಸೂಚಿಸಿದರು.

Scanned with CamScanner

**3.ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.**

ದಾಸರಹಳ್ಳಿ ವಾರ್ಡ್ ನಂ.15ರಲ್ಲಿ ರಸ್ತೆಯಲ್ಲಿ ಉಂಟಾಗಿರುವ ಗುಂಡಿಗಳನ್ನು ಮುಚ್ಚುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಒಂದು ವಾರದಲ್ಲಿ ಪೂರ್ಣಗೊಳಿಸಲಾಗುವುದು ಎಂದು ವಾರ್ಡ್ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

**4. ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಬೆಸ್ಕಾಂಗೆ ಸಂಬಂಧಿಸಿದ ಬಗ್ಗೆ.**

ದಾಸರಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಒಳಚರಂಡಿ ಸಂಪರ್ಕಕ್ಕಾಗಿ ರಸ್ತೆಗಳನ್ನು ಅಗೆದು ಪೈಪ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸಲು ಸಾರ್ವಜನಿಕ ರಸ್ತೆಗಳನ್ನು ಅಗೆದು ಹಾಳುಮಾಡುತ್ತಿರುವುದರಿಂದ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕ ಓಡಾಟಕ್ಕೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ರಸ್ತೆಗಳನ್ನು ತುರ್ತಾಗಿ ಸರಿಪಡಿಸುವ ಬಗ್ಗೆ ಕ್ರಮವಹಿಸಲು ವಾರ್ಡ್ ಅಭಿಯಂತರರು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದಾಗಿ ಸಭೆಯಲ್ಲಿ ತಿಳಿಸಿದರು.

**6. ಇತರೆ ವಿಷಯಗಳ ಬಗ್ಗೆ:**

ಜಿಯೋ ಕಂಪೆನಿಯವರು ಎಲ್ಲಿಯೂ ರಸ್ತೆಯನ್ನು ಸಮರ್ಪಕವಾಗಿ ದುರಸ್ಥಿಪಡಿಸಿರುವುದಿಲ್ಲ ಆದ್ದರಿಂದ ಸಂಬಂಧಿಸಿದ ಕಂಪೆನಿಯವರಿಗೆ ನೋಟೀಸ್ ನೀಡಿ ತುರ್ತಾಗಿ ಸಮರ್ಪಕವಾಗಿ ದುರಸ್ಥಿಪಡಿಸಲು ಸೂಚಿಸಲಾಯಿತು.

ಬೆಸ್ಕಾಂ ಇಲಾಖೆಯಿಂದ ವಾರ್ಡ್‌ನ ಎಲ್ಲಾ ರಸ್ತೆಗಳಲ್ಲಿ ಭೂಗತ ಕೇಬಲ್‌ಗಳನ್ನು ಅಳವಡಿಸುತ್ತಿದ್ದು, ರಸ್ತೆಯ ಎಲ್ಲಾ ಭಾಗಗಳಲ್ಲಿ ಗುಂಡಿಗಳು ಹಾಗೂ ಚೇಂಬರ್‌ಗಳು ಇದ್ದು, ಯಾವುದೇ ಗುಂಡಿಗಳನ್ನು Restoration ಮಾಡಿರುವುದಿಲ್ಲ ಮತ್ತು ಚೇಂಬರ್‌ಗಳು ಎಲ್ಲಿಯೂ ರಸ್ತೆಯ ಮಟ್ಟಕ್ಕೆ ಇರುವುದಿಲ್ಲ ಇದರಿಂದ ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು, ತುರ್ತಾಗಿ ಗುಂಡಿಗಳನ್ನು ಸಮರ್ಪಕವಾಗಿ ಮುಚ್ಚಿಸಲು ಸೂಚಿಸಲಾಯಿತು.

ಅಂತಿಮವಾಗಿ ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸ್ಪಂದಿಸಿ ಬಗೆಹರಿಸಲು, ಕ್ರಮ ತೆಗೆದುಕೊಂಡ ಬಗ್ಗೆ ಎಲ್ಲಾ ಇಲಾಖೆಗಳ ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಹಾಗೂ ಮುಂದಿನ ಸಭೆಗೆ ಎಲ್ಲಾ ಇಲಾಖೆಯಿಂದ ಅಧಿಕಾರಿಗಳು ಸಭೆಗೆ ಹಾಜರಾಗಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ವಾರ್ಡ್ ನೋಡೆಲ್ ಅಧಿಕಾರಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

19/01/22

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 15, ದಾಸರಹಳ್ಳಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ನೋಡಲ್ ಅಧಿಕಾರಿ ಹಾಗೂ**
**ವಾರ್ಡ್ ಸಮಿತಿ ಅಧ್ಯಕ್ಷರು**
**ಮತ್ತು ಕಾರ್ಯಪಾಲಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಅಧಿಕಾರಿಗಳ ಮಾಹಿತಿಗಾಗಿ

1) ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
5) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
7) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಲ್ಲಿಸಿದೆ.
10) ಕಛೇರಿ ಪ್ರತಿ.

Scanned with CamScanner